IGR CS/COMP/CIR/1/2023-COMPUTER SECTION

6644/2023

**ಕರ್ನಾಟಕ ಸರ್ಕಾರ**
**(ನೋಂದಣಿ ಮತ್ತು ಮುದ್ರಾಂಕ ಇಲಾಖೆ)**

**ಸಂಖ್ಯೆ: Comp/09/2003-04**

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
8ನೇ ಮಹಡಿ, ಕಂದಾಯ,
ಕೆಂಪೇಗೌಡ ರಸ್ತೆ, ಬೆಂಗಳೂರು-09
ದಿನಾಂಕ:08-11-2023.

**<u>ಸುತ್ತೋಲೆ-34</u>**

**ವಿಷಯ:** ಕಾವೇರಿ-2.0 ತಂತ್ರಾಂಶದಲ್ಲಿ ದಸ್ತಾವೇಜಿನ ನೋಂದಣಿಯ ಸಮಯದಲ್ಲಿ "Document Summary Report" ನ್ನು ಸರಿಯಾಗಿ ಪರಿಶೀಲಿಸುವ ಕುರಿತು.

**ಉಲ್ಲೇಖ:** 1.ಈ ಕಛೇರಿಯ ಸುತ್ತೋಲೆ ಸಂಖ್ಯೆ: Comp/09/2003-04, ದಿನಾಂಕ: 29-09-2004, (ಸುತ್ತೋಲೆ ಸಂಖ್ಯೆ-11)
2. ಈ ಕಛೇರಿಯ ಸುತ್ತೋಲೆ ಸಂಖ್ಯೆ: Comp/09/2003-04, ದಿನಾಂಕ: 31-01-2007, (ಸುತ್ತೋಲೆ ಸಂಖ್ಯೆ-14)
3. ಈ ಕಛೇರಿಯ ಸುತ್ತೋಲೆ ಸಂಖ್ಯೆ: Comp/09/2003-04, ದಿನಾಂಕ: 27-11-2010, (ಸುತ್ತೋಲೆ ಸಂಖ್ಯೆ-18)
4. ಈ ಕಛೇರಿಯ ಸುತ್ತೋಲೆ ಸಂಖ್ಯೆ: Comp/09/2003-04, ದಿನಾಂಕ: 01-07-2021, (ಸುತ್ತೋಲೆ ಸಂಖ್ಯೆ-29)

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾವೇರಿ ತಂತ್ರಾಂಶದಲ್ಲಿ ದಸ್ತಾವೇಜಿನ ನೋಂದಣಿ ಸಮಯದಲ್ಲಿ ಡೇಟಾ ನಮೂದುಗಳಲ್ಲಿನ ತಪ್ಪುಗಳನ್ನು ತಡೆಗಟ್ಟಲು ನೋಂದಣಿ ಪೂರ್ವದಲ್ಲಿ "Document Summary Report" ನಲ್ಲಿನ ನಮೂದುಗಳನ್ನು ಪರಿಶೀಲಿಸಿ ದಸ್ತಾವೇಜನ್ನು ಹಾಜರುಪಡಿಸಿದ ಪಕ್ಷಕಾರರು, ಕಛೇರಿ ಸಿಬ್ಬಂದಿ, ಗಣಕಯಂತ್ರ ನಿರ್ವಾಹಕರು ಹಾಗೂ ಉಪನೋಂದಣಾಧಿಕಾರಿಗಳ ಸಹಿ ಪಡೆಯಲು ಉಲ್ಲೇಖ(2), (3) ಮತ್ತು (4)ರ ಈ ಕಛೇರಿಯ ಸುತ್ತೋಲೆಗಳಲ್ಲಿ ತಿಳಿಸಲಾಗಿರುತ್ತದೆ. ಹಾಗೂ ಉಲ್ಲೇಖ(1)ರ ಸುತ್ತೋಲೆಯಲ್ಲಿ ದಸ್ತಾವೇಜನ್ನು ನೋಂದಾಯಿಸಿದ ತಕ್ಷಣವೇ ಅದನ್ನು ತಂತ್ರಾಂಶದಲ್ಲಿ ಸ್ಕ್ಯಾನ್ ಮಾಡಲು ತಿಳಿಸಲಾಗಿರುತ್ತದೆ.

ಆದರೆ ಕೆಲವು ಉಪನೋಂದಣಿ ಕಛೇರಿಗಳಲ್ಲಿ ಪ್ರಸ್ತುತ ಕಾವೇರಿ-2.0 ತಂತ್ರಾಂಶದಲ್ಲಿ "Document Summary Report"ನ್ನು ಸರಿಯಾಗಿ ಪರಿಶೀಲನೆ ಮಾಡದೆ ಹಾಗೂ ಸಂಬಂಧಪಟ್ಟವರ ಸಹಿ ಪಡೆಯದೆಯೇ ಅಪಲೋಡ್ ಮಾಡುತ್ತಿರುವುದು ಹಾಗೂ ದಸ್ತಾವೇಜನ್ನು ನೋಂದಣಿಯ ದಿನವೇ ಸ್ಕ್ಯಾನ್ ಮಾಡದೆ ಇರುವುದು ಹಾಗೂ Acknowledgment Slip Generate ಮಾಡದೇ ಇರುವುದು ಈ ಕಛೇರಿಯ ಗಮನಕ್ಕೆ ಬಂದಿರುತ್ತದೆ. ಆದುದರಿಂದ Document Summary Report ಪರಿಶೀಲನೆ ಹಾಗೂ ದಸ್ತಾವೇಜನ್ನು ಸ್ಕ್ಯಾನ್ ಮಾಡುವ ಕುರಿತಂತೆ ಈ ಕೆಳಕಂಡ ನಿರ್ದೇಶನಗಳನ್ನು ನೀಡಿದೆ.

1. ಉಲ್ಲೇಖ(2), (3) ಮತ್ತು (4)ರ ಸುತ್ತೋಲೆಗಳಲ್ಲಿನ ನಿರ್ದೇಶನದಂತೆ ಕಾವೇರಿ-2.0 ತಂತ್ರಾಂಶದಲ್ಲಿಯೂ ಸಹ ದಸ್ತಾವೇಜಿನ ನೋಂದಣಿ ಪೂರ್ವದಲ್ಲಿ "Document Summary Report"ನ್ನು ಸರಿಯಾಗಿ ಪರಿಶೀಲಿಸಿ, ಪಕ್ಷಕಾರರ, ಗಣಕಯಂತ್ರ ನಿರ್ವಾಹಕರ, ಕಛೇರಿ

ಸಿಬ್ಬಂದಿ (ಪ್ರ.ದ.ಸ / ದ್ವಿ.ದ.ಸ) ಹಾಗೂ ಉಪನೋಂದಣಾಧಿಕಾರಿಗಳು ಸಹಿ ಪಡೆದು ನಂತರ ತಂತ್ರಾಂಶದಲ್ಲಿ ಸ್ಕ್ಯಾನ್ ಹಾಗೂ ಅಪಲೋಡ್ ಮಾಡಲು ತಿಳಿಸಿದೆ.

2. ಉಲ್ಲೇಖ(1)ರ ಸುತ್ತೋಲೆಯಲ್ಲಿ ತಿಳಿಸಿರುವಂತೆ ನೋಂದಣಿ ಪ್ರಕ್ರಿಯೆ ಪೂರ್ಣಗೊಂಡ ತಕ್ಷಣವೇ ದಸ್ತಾವೇಜನ್ನು ಸ್ಕ್ಯಾನ್ ಮಾಡಿ, ಮರುಕ್ಷಣವೇ Acknowledgment Slip Generate ಮಾಡಿ ಪಕ್ಷಕಾರರಿಗೆ ದಸ್ತಾವೇಜನ್ನು ಹಸ್ತಾಂತರಿಸಲು ಸೂಚಿಸಿದೆ.

**ನೋಂದಣಿ ಮಹಾಪರಿವೀಕ್ಷಕರು ಮತ್ತು**
**ಮುದ್ರಾಂಕಗಳ ಆಯುಕ್ತರು, ಬೆಂಗಳೂರು.**

**ಇವರಿಗೆ,**

ರಾಜ್ಯದ ಎಲ್ಲಾ ಉಪನೋಂದಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು:**

ರಾಜ್ಯದ ಎಲ್ಲಾ ಜಿಲ್ಲಾನೋಂದಣಾಧಿಕಾರಿಗಳಿಗೆ ಮಾಹಿತಿಗಾಗಿ.